# <u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ</u>

ಸಿ.ಸಿ ನಂಃ 384/2024

ಸಿಡಬ್ಲ್ಯೂಃ 1 ಪಿಡಬ್ಲ್ಯೂಃ 1

| | |
|---|---|
| ಹೆಸರುಃ | ಪುನೀತ ಕುಮಾರ ನಾರಾಯಣ ನಾಯ್ಕ |
| ತಂದೆ ಹೆಸರುಃ | ನಾರಾಯಣ ನಾಯ್ಕ |
| ವಯಸ್ಸುಃ | 27 ವರ್ಷ |
| ಉದ್ಯೋಗಃ | ಕೃಷಿ |
| ವಾಸಃ | ಹೊಸುರು ಸಿದ್ದಾಪುರ |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 22-01-2026 ರಂದು ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ</u>**

1.ಚಾಸಾ-2 ರಿಂದ 6 ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತು.

2.ದಿಃ 02-07-2024 ರಂದು 7-45 ಸಮಯದಲ್ಲಿ ಆರಿದ್ರಾ ಮಳೆ ಹಬ್ಬದ ಪ್ರಯುಕ್ತ ದೇವರ ಮೆರವಣಿಗೆಯಲ್ಲಿ ಹೊಸುರು - ಜೊಗ ಸರ್ಕಲ್ ಗೆ ನಾನು ಹೋಗುತ್ತಿದ್ದಾಗ, ಆರೋಪಿತರು ಮತ್ತು ವೆಂಕಟೇಶ ಗಣಪತಿ ನಾಯ್ಕ ಅಲಿಯಾಸ ವಿನಯ ರವರು ನನಗೆ ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡಿರುತ್ತಾರೆ. ಆಗ 1 ನೇ ಆರೋಪಿ ಮರದ ಬಡಿಗೆಯಿಂದ ನನ್ನ ಬಲಭಾಗದ ಕೆನ್ನಗೆ, ಬುಜಕ್ಕೆ ಹೊಡೆದಿರುತ್ತಾನೆ. ನಂತರ ವೆಂಕಟೇಶ ಗಣಪತಿ ನಾಯ್ಕ ಅಲಿಯಾಸ ವಿನಯರವರು ಕಬ್ಬಿಣದ ರಾಡ್ ನಿಂದ ನನ್ನ ಕಾಲಿಗೆ ಹೊಡೆಯಲು ಬಂದಾಗ ನಾನು ತಪ್ಪಿಸಿಕೊಂಡಿರುತ್ತೇನೆ. ನಂತರ ಸದರಿ ಗಲಾಟೆಯನ್ನು ಚಾಸಾ-4 ರವರು ಬಿಡಿಸಲು ಬಂದಾಗ ಅವರಿಗೂ ಸಹ ಆರೊಪಿತರು ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ತಳ್ಳಿರುತ್ತಾರೆ. ನಂತರ ಆರೋಪಿತರು ನನಗೆ ಜೀವ ಬೆದರಿಕೆ ಹಾಕಿರುತ್ತಾರೆ. ನಾನು ಅದೇ ದಿನ ಸಿದ್ದಾಪುರ ಸರ್ಕಾರಿ ಆಸ್ಪತ್ರೆ ಚಿಕಿತ್ತೆ ಪಡೆದಿರುತ್ತೇನೆ. ಆ ನಂತರ ನಾನು ಸಿದ್ದಾಪುರ ಪೊಲೀಸ ಠಾಣೆಯಲ್ಲಿ ಆರೋಪಿತರ ವಿರುದ್ದ ದೂರು ನೀಡಿರುತ್ತೇನೆ.

3. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ದಿಃ 03-07-2024 ರ ದೂರು ಆಗಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-1 (ಎ) ಎಂದು ಗುರುತಿಸಲಾಯಿತು.

4. ದಿಃ 04-07-2024 ರಂದು ಪೊಲೀಸರು ನಮ್ಮ ಊರಿಗೆ ಬಂದಾಗ ನಾನು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಅದೇ ದಿನ ಮಧ್ಯಾಹ್ನ 1-45 ರಿಂದ 2-15 ರ ವರೆಗೆ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆ ಕಾಲಕ್ಕೆ ಸದರಿ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ. ನಂತರ ಸದರಿ ಸ್ಥಳದ ಭಾವಚಿತ್ರ ತೆಗೆಸಿರುತ್ತಾರೆ.

5. ಸದರಿ ಪಂಚನಾಮೆ, ಕಚ್ಚಾ ನಕಾಶೆ ಹಾಗೂ ಭಾವಚಿತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ದಿಃ 04-07-2024 ರ ಘಟನಾ ಸ್ಥಳದ ಪಂಚನಾಮೆ ಆಗಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2 (ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ದಿಃ 04-07-2024 ರ ಘಟನಾ ಸ್ಥಳದ ಕಚ್ಚಾ ನಕಾಶೆ ಆಗಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-3 (ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈ ಹಂತದಲ್ಲಿ ಒಂದು ಭಾವಚಿತ್ರವನ್ನು ತೋರಿಸಿದ್ದು, ಸದರಿ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-4 ಎಂದು ಗುರುತಿಸಲಾಯಿತು.

6. ದಿಃ 05-07-2024 ರಂದು ನಾನು ಚಾಸಾ-11 ರವರ ಮುಂದೆ ಸದರಿ ವೆಂಕಟೇಶ ಗಣಪತಿ ನಾಯ್ಕ ಅಲಿಯಾಸ ವಿನಯರವರು ಹಾಗೂ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಮಾರಕ ಅಸ್ತ್ರಗಳಿಂದ ಹೊಡೆದಿಲ್ಲ ಎಂದು ಮರುಹೇಳಿಕೆ ನೀಡಿರುವುದಿಲ್ಲ. ಆ ದಿನ ಆರೋಪಿತರು ಮತ್ತು ಸದರಿ ವೆಂಕಟೇಶ ಗಣಪತಿ ನಾಯ್ಕ ಅಲಿಯಾಸ ವಿನಯರವರು ನನಗೆ ಹೊಡೆದ ಬಡಿಗೆ ಮತ್ತು ಕಬ್ಬಿಣದ ರಾಡ್ ನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಬಡಿಗೆ ಮತ್ತು ಕಬ್ಬಿಣದ ರಾಡ್ ನ್ನು 1 ನೇ ಆರೋಪಿಯೇ ತೆಗೆದುಕೊಂಡು ಹೋಗಿರುತ್ತಾರೆ. ಆ ದಿನ ನನಗೆ ಮತ್ತು ಚಾಸಾ-4 ರವರಿಗೆ ಹೊಡೆದವರನ್ನು ನೋಡಿದರೆ ಗುರುತಿಸುತ್ತೇನೆ. ಅವರುಗಳಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿತರು ಆಗಿರುತ್ತಾರೆ. ಇನ್ನೊಬ್ಬ ಸದರಿ ವೆಂಕಟೇಶ ಗಣಪತಿ ನಾಯ್ಕ ಅಲಿಯಾಸ ವಿನಯರವರನ್ನು ದೋಷಾರೋಪಣೆ ಪಟ್ಟಿಯಿಂದ ಕೈಬಿಟ್ಟಿರುತ್ತಾರೆ. ಸದರಿ ವೆಂಕಟೇಶ ಗಣಪತಿ ನಾಯ್ಕ ಅಲಿಯಾಸ ವಿನಯರವರನ್ನು ನೋಡಿದರೆ ಗುರುತಿಸುತ್ತೇನೆ.

ಈ ಹಂತದಲ್ಲಿ ಮಾನ್ಯ ಎ ಪಿ ಪಿ ರವರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.





(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**